ಮಾತ್ರ ನೀರುಯ್ಯಣಕೆ ಪಾಟ ಮಾಡಿದ್ದಳು. ಅಪ್ಪ ಹೊತ್ತುಟ್ಟ ಮುನ್ನ ತನ್ನ ಕಾಯಕದ ಮೇಲೆ ಸೈಕಲ್ ಹಾಕಿಕೊಂಡು ಊರೂರ ಮೇಲೆ ಹೋಗುವಷ್ಟರಲ್ಲಿ ಶಿವಮ್ಮ ಮಗನನ್ನು ಬಚ್ಚಲ್ಲಿ ಬಗ್ಗಿಸಿ ಉಜ್ಜಲ್ ತಗಂಡು ವಾರದ ರೋಸೆಲ್ಲ ತಿಕ್ಕಿ ತೆಗೆದು ತಿರುಪತಿ ತಿಮ್ಮಪ್ಪನಿಗೆ ಮೂರು ನಾಮ ಬಡಿದು ಸ್ಕೂಲಿಗೆ ಕಳಿಸುತ್ತಿದ್ದಳು.

ಆಗಿನಿಂದಲೇ ಶನಿವಾರದ ಸ್ನಾನಕ್ಕೆ ರೂಢಿಯಾಗಿದ್ದ ಕೆಂಪ ತನ್ನ ಅವ್ವನ ಕೈಯ್ಯ ಬೆನ್ನುಜ್ಜಿಗೆ ಮಾರುಹೋಗಿದ್ದ. ಅವ್ವಳೂ ಸಹ ಅಷ್ಟೆ 'ನನ್ನುಡುಗ್ನಂಗೆ ಮೈ ತಿಕ್ಕಿಸ್ಕೆಣ ಈಗಿನ ಕಾಲದ ಹುಡುಗ್ರುನ್ನೆ ನೋಡಿಲ್ಲ' ಎಂದು ಮೆಚ್ಚುಗೆ ಸೂಸುತ್ತ ಮಗನ ಕರಿ ಮೈ ಬೆಳಗುತ್ತಿದ್ದಳು. ಹೈಸ್ಕೂಲ್ ಓದುವಾಗಲೆ ಗಡ್ಡ ಮೀಸೆ ಬಲಿತ ಗಂಡಾಳಾಗಿದ್ದ ಕೆಂಪನನ್ನು ನೋಡಿದ ಯಾರೂ ಸಹ ಇವ್ನು ಎಸ್ಸೆಸ್ಸೆಲ್ಸಿ ಪಾಸ್ ಮಾಡ್ತನೆ ಎಂದು ನಂಬಿರಲಿಲ್ಲ. ಆದರೆ, ಕೆಂಪ ಅನಾಮತ್ ಆರು ಸಬ್ಜೆಕ್ಟನ್ನು ಒಂದೇ ಉಸಿರಿಗೆ ಪಾಸು ಮಾಡಿ ನಗರದ ಕಾಲೇಜಿಗೆ ಸೇರಿ ಬಿಟ್ಟ. ಕಾಲೇಜಿಗೆ ಹೋಗ್ ಹೋಗುತ್ತಲೆ ಅದ್ಯಾರು ಹೇಳಿದರೋ ಏನೊ ಅಂಚೆ ಇಲಾಖೆಯ ಹುದ್ದೆಗೆ ಅರ್ಜಿ ಸಲ್ಲಿಸಿ ಮನೆ ಮನೆಗು ಪತ್ರ ತಲುಪಿಸುವ ಪೋಸ್ಟ್ ಮೆನ್ ಹುದ್ದೆ ಗಿಟ್ಟಿಸಿಕೊಂಡೇ ಬಿಟ್ಟ.

ಶಿಕ್ಷಣಕ್ಕೆ ಹಿರೀಕನಂತೆಯೂ ಉದ್ಯೋಗಕ್ಕೆ ಕಿರಿಯನಂತೆಯೂ ಕಾಣುತ್ತಿದ್ದ ಕೆಂಪ ಉದ್ಯೋಗ ನಿಮಿತ್ತ ತನ್ನ ಹುಟ್ಟೂರನ್ನ ಬಿಟ್ಟು ದೂರದ ನಗರದಲ್ಲಿ ಬಾಡಿಗೆ ಮನೆ ಹಿಡಿದು ವಾಸಿಸತೊಡಗಿದ. ಉದ್ಯೋಗ ಸಿಕ್ಕ ತಕ್ಷಣ ಮದುವೆ ಮಾಡಬೇಕೆಂಬುದು ಅವ್ವನ ಆಸೆಯಾದರೂ ಇನ್ನೊಂದಷ್ಟು ವರ್ಷ ದುಡಿಯಲಿ ಎಂಬುದು ಅಪ್ಪನ ಬುದ್ಧಿವಂತಿಕೆಯಾಗಿ ಇದೇ ಜಂಜಾಟದಲ್ಲಿ ಕೆಂಪ ಪೋಸ್ಟ್ ಹಂಚುತ್ತ ಐದು ವರ್ಷಗಳನ್ನ ಪೋರೈಸಿದ. ಈ ಮಧ್ಯೆ ಕೆಂಪ ಓಡಾಡಲು ಸ್ಪ್ಲೆಂಡರ್ ಗಾಡಿ ತೆಗೆದುಕೊಂಡುದರ ಜೊತೆಗೆ ಊರಿಗೋದಾಗ ಅಪ್ಪನಿಗೆ 'ಸಾಕು ನಿಲ್ಲಿಸು ನಿನ್ನ ಬೆನ್ನುಜ್ಜ ಕಾಯಕವ' ಎನ್ನುವಷ್ಟರ ಮಟ್ಟಿಗೆ ಪ್ರಬುದ್ಧತೆ ತೋರುವವನಾಗಿದ್ದ. ಉದ್ಯೋಗದ ಸುಖದಲ್ಲಿ ಅಡ್ಡದಿಡ್ಡಿ ಬೆಳೆಯುತ್ತಿರುವ ಮಗನಿಗೆ ಗಂಟಾಕಬೇಕು ಎಂದು ಅಂತಿಮವಾಗಿ ತೀರ್ಮಾನಿಸಿದ ನಂತರ ತಕ್ಕ ವಧುವನ್ನು ಹುಡುಕಿಕೊಂಡು ಹತ್ತಾರು


ಕಲೆ: ಎಸ್.ವಿ. ಹೂಗಾರ

ಊರು ಸುತ್ತಿದರು. ಉದ್ಯೋಗದಲ್ಲಿರುವ ವರ ಎಂದು ಆಸೆ ಪಟ್ಟು ಬಂದ ಹೆಣ್ಣಿನ ಕಡೆಯವರಿಗೆ ತಾಯಿ ಮಗ ಸೇರಿಕೊಂಡು ಕುಳ್ಳಕೈತೆ, ಕಪ್ರಗೈತೆ ಇತ್ಯಾದಿ ಜರಿದದ್ದೂ ಆಯಿತು. ಕೊನೆಗೆ ಮಲ್ಲಿಗೆರೆಯ ಹೋರಿ ಹನುಮಂತಯ್ಯನ ಡಿಗ್ರಿ ಓದಿರುವ ಮಗಳು ಮಾಲತಿಯ ರೂಪ ಲಾವಣ್ಯಕ್ಕೆ ಮನಸೋತು ತಾಯಿ ಮಗ ಇಬ್ಬರೂ ಮದುವೆಗೆ ಒಪ್ಪಿದರು. ಬಚ್ಚಲ್ಲೂರಿನ ಕೀರ್ತಿ ತಿಳಿದಿದ್ದ ಹನುಮಂತಯ್ಯ ಅದರಾಚೆಗೆ ಹುಡುಗ ಸೆಂಟ್ರೆಲ್ ಗರ್ಮೆಂಟ್ ಕೆಲುಸ್ದಲ್ಲಿ ಅವ್ನೆ